MVC No.218/2017 PW-1

**<u>ದಿನಾಂಕ 16.06.2022 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು ಃ ಎದುರುದಾರರ ಪರ ವಕೀಲರಿಂದ ಃ</u>**

ಈಗ ನನಗೆ 71 ವರ್ಷ ವಯಸ್ಸಾಗಿದೆ. ನನ್ನ ಬಳಿ ಆಧಾರ್ ಕಾರ್ಡ್ ಇದೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇಲ್ಲ. ಅಪಘಾತವಾದ ಸಮಯದಲ್ಲಿ ನನಗೆ 66 ವರ್ಷ ಮೇಲ್ಪಟ್ಟು ಆಗಿತ್ತು ಎಂದರೆ 65 ವರ್ಷ ವಯಸ್ಸಾಗಿದೆ. ಸದರಿ ಅಪಘಾತವಾಗಿ 4 ವರೆ ವರ್ಷಗಳಾಗಿವೆ ಎಂದರೆ ಹೌದು. ಈಗ ನನಗೆ ತೋರಿಸುತ್ತಿರುವ ಆಧಾರ್ ಕಾರ್ಡ್ ನನಗೆ ಸೇರಿದ್ದಾಗಿದೆ ಅದರಲ್ಲಿ ಜನ್ಮ ವರ್ಷ 1949 ಎಂದು ನಮೂದಾಗಿದೆ ಎಂದರೆ ಹೌದು ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಆರ್ 1 ಎಂದು ಗುರುತಿಸಲಾಯಿತು. ನಿಆರ್ 1 ಪ್ರಕಾರ ಅಪಘಾತವಾದ ಸಮಯದಲ್ಲಿ 66 ವರ್ಷ ಮೇಲ್ಪಟ್ಟು ಆಗಿತ್ತು ಎಂದರೆ ಹೌದು. ನಾನು ನಿವೃತ್ತಿ ಹೊಂದಿ ವಿಶ್ರಾಂತಿ ಜೀವನ ನಡೆಸುತ್ತಿದ್ದೇನೆ ಎಂದರೆ ಹೌದು.ಅಪಘಾತವಾಗುವ ಸಮಯದಲ್ಲಿ ನಾನು ಟೈಲರ್ ಕೆಲಸ ಮಾಡುತ್ತಿದ್ದೆ. ನಾನು ಟೈಲರ್ ಕೆಲಸ ಮಾಡುತ್ತಿದ್ದ ಬಗ್ಗೆ ನನ್ನ ಪ್ರಮಾಣ ಪತ್ರದಲ್ಲಾಗಲೀ ಅಥವಾ ಅರ್ಜಿಯಲ್ಲಿ ನಮೂದಿಸಿಲ್ಲ ಎಂದರೆ ಹೌದು. ನಾನು ಟೈಲರ್ ಆಗಿ ಕೆಲಸ ಮಾಡುತ್ತೇನೆ ಎನ್ನುವ ಬಗ್ಗೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಹೌದು.

ನಾನು ಅಪಘಾತವಾದ ದಿನ ಹೊಸವರ್ಷದ ಪ್ರಯುಕ್ತ ಚರ್ಚ್ ನಲ್ಲಿ ಪ್ರಾರ್ಥನೆ ಮುಗಿಸಿ ಮನೆಗೆ ಹೋಗುತ್ತಾ ಇದ್ದೆ. ಅಪಘಾತವಾದ ದಿನ ನನಗೆ ಪಲ್ಸರ್ ವಾಹನ ಬಂದು ಡಿಕ್ಕಿ ಪಡಿಸಿರುತ್ತದೆ. ಅಪಘಾತವಾದ ನಂತರ ನನಗೆ ಜ್ಞಾನ ಇತ್ತು. ಅಪಘಾತವಾದ ಬಗ್ಗೆ ಅದೇ ದಿನ ದೂರು ಕೊಡಲು ನನಗೆ ಗಾಯಗಳು ಆಗಿದ್ದರಿಂದ ಸಾಧ್ಯವಾಗಿಲ್ಲ. ಅಪಘಾತವಾದ ನಂತರ ಪಲ್ಸರ್ ವಾಹನವನ್ನು ಯಾರು ಚಾಲನೆ ಮಾಡುತ್ತಿದ್ದರು ಎಂದು ನಾನು ನೋಡಿದ್ದೆ ಅವರು ಕೆಳಕ್ಕೆ ಬಿದ್ದಿದ್ದರು. ಚಾಲಕನ ಹೆಸರನ್ನು ತಿಳಿದುಕೊಳ್ಳಲು ಆಗಲಿಲ್ಲ . ಸದರಿ ಚಾಲಕನಿಗೆ ಏನು ಪೆಟ್ಟಾಗಿರಲಿಲ್ಲ. ನಾನು

ಅಪಘಾತವಾದ ನಂತರ ಚನ್ನಪಟ್ಟಣ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಆಸ್ಪತ್ರೆಯಲ್ಲಿ ನನಗೆ ಪ್ರಥಮ ಚಿಕಿತ್ಸೆ ನೀಡಿದ ನಂತರ,ಆಸ್ಪತ್ರೆಯಲ್ಲಿ ನಾನು ಅಪಘಾತ ಪಡಿಸಿದ ವಾಹನದ ಬಗ್ಗೆ ಹೇಳಿರುತ್ತೇನೆ. ಅಪಘಾತ ಪಡಿಸಿದ ವಾಹನದ ಸಂಖ್ಯೆ 3337 ಆಗಿರುತ್ತದೆ. ಸದರಿ ಸಂಖ್ಯೆಯನ್ನು ಆಸ್ಪತ್ರೆಯಲ್ಲಿ ಬರೆಸಿಲ್ಲ. ನನಗೆ ಆಗ ವಾಹನದ ಸಂಖ್ಯೆ ಗೊತ್ತಿತ್ತು. ಆಸ್ಪತ್ರೆಯಿಂದ ಪೋಲಿಸ್ ಠಾಣೆಗೆ ನೀಡಿದಂತಹ ಇಂಟಿಮೇಷನ್ ಅನ್ನು ನನಗೆ ಹಾಜರು ಪಡಿಸಲು ಸಾಧ್ಯವಿಲ್ಲ. ನಾನು ಅಪಘಾತಪಡಿಸಿದ ವಾಹನವನ್ನು ಮತ್ತು ಚಾಲಕನನ್ನು ಬಿಟ್ಟು ಪರಿಹಾರ ಪಡೆಯುವ ಉದ್ದೇಶದಿಂದ ಈ ಪ್ರಕರಣದಲ್ಲಿ ಹೇಳಿದ ವಾಹನವನ್ನು ಈ ಕೇಸಿನಲ್ಲಿ ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಅಪಘಾತ ಪಡಿಸಿದ ವಾಹನಕ್ಕೆ ವಿಮೆ ಇರಲಿಲ್ಲ ಮತ್ತು ಅಪಘಾತ ಪಡಿಸಿದ ವಾಹನದ ಚಾಲಕನಿಗೆ ಡಿಎಲ್ ಇರಲಿಲ್ಲ ಆದ್ದರಿಂದ ನಾನು ಉದ್ದೇಶ ಪೂರ್ವಕವಾಗಿ ಆಸ್ಪತ್ರೆಯಲ್ಲಿ ವಾಹನದ ನೊಂದಣಿ ಸಂಖ್ಯೆಯನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ಅಪಘಾತವನ್ನು ಕಣ್ಣಾರೆ ನೋಡಿದ ಸಾಕ್ಷಿದಾರರನ್ನು ನ್ಯಾಯಾಲಯಕ್ಕೆ ಕರೆಯಿಸಿ ಸಾಕ್ಷ್ಯಾ ನುಡಿಸಲು ತೊಂದರೆ ಇಲ್ಲ. ಈ ಅಪಘಾತವಾದ 5 ದಿನದ ನಂತರ ನಾನು ಉದ್ದೇಶಪೂರ್ವಕವಾಗಿ ಈ ಕೇಸಿನಲ್ಲಿ ಹೇಳಿದ ವಾಹನಕ್ಕೆ ವಿಮೆ ಇರುವುದನ್ನು ಖಾತರಿ ಪಡಿಸಿಕೊಂಡು ಈ ವಾಹನ ಅಪಘಾತಪಡಿಸಿದೆ ಎಂದು ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತ ಪಡಿಸಿದ ವ್ಯಕ್ತಿಯನ್ನು ಮತ್ತು ವಾಹನವನ್ನು ಮರೆಮಾಚಿ ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಜೊತೆ ಇದ್ದವರೇ ವಾಹನದ ಚಾಲಕನ ವಿರುದ್ದ ದೂರನ್ನು ನೀಡಬಹುದಾಗಿತ್ತು ಆದರೆ ಉದ್ದೇಶಪೂರ್ವಕವಾಗಿ ಅಪಘಾತವಾದ ತಕ್ಷಣ ದೂರನ್ನು ನೀಡಿಲ್ಲ ಎಂದರೆ ಸರಿಯಲ್ಲ. ನನಗೆ ಅಪಘಾತದಿಂದ ನನ್ನ ಚಿಕಿತ್ಸೆಗೆ 1 ಲಕ್ಷ ರೂಪಾಯಿ ಹಣ ಖರ್ಚಾಗಿದೆ ಎನ್ನುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಮತ್ತು ನಾನು ಹಾಜರು ಪಡಿಸಿರುವ ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಚಿಕಿತ್ಸೆ ನೀಡಿದ ವೈದ್ಯರನ್ನು ಕರೆತಂದು ಸಾಕ್ಷ್ಯಾ ನುಡಿಸಲು ತೊಂದರೆ ಇಲ್ಲ. ನಾನು ಅಪಘಾತದ ಮುಂಚೆ ತಿಂಗಳಿಗೆ 20 ಸಾವಿರ ಸಂಪಾದನೆ ಮಾಡುತ್ತಿದ್ದೆ ಎನ್ನುವ ಬಗ್ಗೆ ಬ್ಯಾಂಕ್ ಸ್ಟೇಟ್ ಮೆಂಟ್ ಹಾಗೂ ಇತರ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ. ನಾನು ಅಪಘಾತಕ್ಕಿಂತ ಮುಂಚೆ ತಿಂಗಳಿಗೆ 20 ಸಾವಿರ ಸಂಪಾದನೆ ಮಾಡುತ್ತಿರಲಿಲ್ಲ ಪರಿಹಾರ

ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾಹನದ ಮಾಲೀಕರ ಜೊತೆ ಶಾಮೀಲಾಗಿ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಅಪಘಾತ ಪಡಿಸಿದ ಚಾಲಕ ಬೇರೆಯನಾಗಿದ್ದು ಆತನಿಗೆ ಡಿಎಲ್ ಇಲ್ಲದೇ ಇರುವುದರಿಂದ ಈ ಕೇಸಿನಲ್ಲಿ ಹೇಳಿದ ವಾಹನ ಮತ್ತು ವಾಹನದ ಚಾಲಕನ ಮೇಲೆ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)

ಓ.ಹೇ.ಕೇ.ಸ.ಒ

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.